# ಕಟುವಾಸ್ತವಗಳ ನಡುವೆ ಕನ್ನಡ



ಕನ್ನಡ ಭಾಷೆ ಕನ್ನಡನಾಡಿನಲ್ಲಿ ಉಳಿದು ಬೆಳೆಯಬೇಕೇ ಹೊರತು ಬೇರೆ ರಾಜ್ಯಗಳಲ್ಲಿ ಅದನ್ನು ಸಾಧಿಸುವುದು ಸಾಧ್ಯವೇ ಎಂಬ ಮೂಲಭೂತ ಪ್ರಶ್ನೆಯನ್ನು ಎ.ಆರ್. ಕೃಷ್ಣಶಾಸ್ತ್ರಿಗಳು ಕನ್ನಡಿಗರ ಮುಂದಿಟ್ಟು ಏಳು ದಶಕಗಳೇ ಕಳೆದಿವೆ. ಅಲ್ಲಿಂದಾಚೆಗೆ ಕನ್ನಡದ ಏಳುಬೀಳುಗಳು ಎಷ್ಟೆಷ್ಟು!

ಹರಿಯುವ ನದಿಯಂತಿರುವ ಭಾಷೆಯಲ್ಲಿ ಮೂಡುವ ತೆರೆಗಳನ್ನು ನಾವು ಸವಾಲುಗಳು, ಅಡ್ಡಿಆತಂಕಗಳು ಎಂದೇ ಪರಿಗಣಿಸುತ್ತೇವೆ. ಸಮಕಾಲೀನ ಬೆಳವಣಿಗೆ ಭಾಷೆಯ ಮೇಲೆ ಪ್ರಭಾವ ಬೀರುತ್ತದೆ, ಅದಕ್ಕೆ ಭಾಷೆಯ ಪ್ರತಿಕ್ರಿಯೆ ಇರುತ್ತದೆ ಎಂಬುದೂ ನಮಗೆ ಗೊತ್ತು. ವಸಾಹತೀಕರಣವನ್ನು ಕನ್ನಡವೂ ಸೇರಿ ಭಾರತದ ಎಲ್ಲ ಭಾಷೆಗಳು ಮತ್ತು ಅವುಗಳ ಸಾಹಿತ್ಯ ಹೇಗೆ ಎದುರಿಸಿದವು ಎಂಬುದನ್ನು ನೋಡಿದ್ದೇವೆ. ಹೊರಗಿನಿಂದ ಬಂದ ಹೊಸದರಲ್ಲಿದ್ದ ಒಳಿತುಗಳನ್ನು ಅರಗಿಸಿಕೊಂಡು, ಒಳಗಿನ ಹಳೆಯದರಲ್ಲಿದ್ದ ಸತ್ವವನ್ನು ಮತ್ತೆ ಹಾಯಿಸಿಕೊಂಡು ಇಡೀ ಭಾರತವೇ ಪುನರುಜ್ಜೀವನ ಪ್ರಕ್ರಿಯೆಗೆ ಒಳಗಾಯಿತು. ಅದು ತನಗೆ ತಾನೇ ಆಗಿದ್ದಲ್ಲ; ಅದು ಚಿಂತನೆಯ ನೆಲೆಯಲ್ಲಿ ನಡೆದ ಕ್ರಾಂತಿ.

ಕನ್ನಡ ಮತ್ತು ಜಾಗತೀಕರಣ ಎಂಬ ವಿಷಯವನ್ನು ಇದರ ಬೆಳಕಿನಲ್ಲಿ ನೋಡುವ ಅಗತ್ಯವಿದೆ. ಬಾವುಟ, ಹೊಡೆದಾಟ, ಹೋರಾಟಗಳ ಜೊತೆಗೆ ಕನ್ನಡವನ್ನು ಅನ್ನದ ಪ್ರಶ್ನೆ ಮಾಡುವ, ತಂತ್ರಜ್ಞಾನಕ್ಕೆ ಕನ್ನಡವನ್ನು ಹೊಂದಿಸುವ ದಿಟ್ಟ ರಾಜಕೀಯ ನಿರ್ಧಾರಗಳು ಕನ್ನಡವನ್ನು ಬೆಳೆಸುವ ಮುಖ್ಯ ಪರಿಕರಗಳಾಗಬೇಕಿದೆ. ಅದರೊಂದಿಗೆ ಕನ್ನಡವನ್ನು ಆಡುವ ಜನರ ಮನೆಮನಗಳಲ್ಲಿ ಅದು ಮರುಹುಟ್ಟು ಪಡೆಯಬೇಕಾಗಿದೆ.

ಈ ಕುರಿತು ವಿಭಿನ್ನ ಕ್ಷೇತ್ರಗಳಲ್ಲಿ ಕ್ರಿಯಾಶೀಲರಾಗಿರುವ ಹಲವು ಕನ್ನಡಿಗರು ನಡೆಸಿರುವ ಚರ್ಚೆಯೊಂದಿಗೆ ಮತ್ತು ಕನ್ನಡಕ್ಕೆ ಬಂಗಾಳಿ ಸಾಹಿತ್ಯವನ್ನು ಪರಿಚಯಿಸಿದ ಅಹೋಬಲ ಶಂಕರ ಅವರ ನೆನಪಿನೊಂದಿಗೆ 'ಮಯೂರ' ತನ್ನ ನೆಚ್ಚಿನ ಓದುಗರಿಗೆ ರಾಜ್ಯೋತ್ಸವದ ಶುಭಾಶಯ ಹೇಳುತ್ತದೆ.

**-ಆರ್. ಪೂರ್ಣಿಮಾ**